**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ. ಸಿ.ಸಿ ನಂ.671/2024.**

| | |
|---|---|
| ಪಿರ್ಯಾದುದಾರರುಃ- | ಸೇಂಟ್ ಮಿಲಾಗ್ರೀಸ್ ಕ್ರೆಡಿಟ್ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ಲಿ., ಚಂದಾವರ ಶಾಖೆ, ಪ್ರತಿನಿಧಿಸುವವರು, ವಿನಾಯಕ ತಂದೆ ರಾಮದಾಸ ಮಡಿವಾಳ, ನಿಷ್ಪತ ವ್ಯವಸ್ಥಾಪಕರು, ವಯಸ್ಸು ಸುಮಾರುಃ- 36 ವರ್ಷ, ತಾಲೂಕುಃ- ಹೊನ್ನಾವರ (ಉ.ಕ.). |

**-ವಿರುದ್ಧ-**

| | |
|---|---|
| ಆರೋಪಿಯ ಹೆಸರುಃ- | ರಾಮ ನಾರಾಯಣ ಉಪ್ಪಾರ, ವಯಸ್ಸು ಸುಮಾರುಃ- 30 ವರ್ಷ, ಸಾಕೀನಃ- ಸಿದ್ಧನಭಾವಿ, ಅಂಚೆಃ- ಕುಮಟಾ, ತಾಲೂಕುಃ- ಕುಮಟಾ (ಉ.ಕ.). |

*****

**ದಂಡ ಪ್ರಕ್ರಿಯಾ ಸಂಹಿತೆ ಕಲಂ. 313 ರನ್ವಯ ಆರೋಪಿಯ ಹೇಳಿಕೆ.**

ಪ್ರಶ್ನೆಃ 1. ನೀವು ಪಿರ್ಯಾದುದಾರರ ಪರವಾಗಿ ಫ್ರಾಸಾ-1 ರವರ ಹೇಳಿಕೆಯನ್ನು ಕೇಳಿದ್ದೀರಾ?

ಆರೋಪಿಯ ಉತ್ತರಃ- ಹೌದು.

ಪ್ರಶ್ನೆಃ 2. ಫ್ರಾಸಾ-1 ರವರು ತಮ್ಮ ಸಾಕ್ಷ್ಯದಲ್ಲಿ, ಪಿರ್ಯಾದಿ ಸಂಸ್ಥೆಯಲ್ಲಿ ಆರೋಪಿಯಾದ ನೀವು Business loan ಖಾತೆ ನಂ.1356 ರಡಿಯಲ್ಲಿ ಸಾಲವನ್ನು ಪಡೆದುಕೊಂಡಿದ್ದು, ಸದರಿ ಸಾಲದ ಮರುಪಾವತಿಗಾಗಿ ನೀವು ಪಿರ್ಯಾದಿ ಸಂಸ್ಥೆಯ ಹೆಸರಿಗೆ ನಿಮ್ಮ ಬ್ಯಾಂಕ್ ಖಾತೆಯುಳ್ಳ **ಕರ್ನಾಟಕ ಬ್ಯಾಂಕ್., ಕುಮಟಾ** ಶಾಖೆಯ ನಿಪಿ-1 ರ ಚೆಕ್ ನಂ.646394 ನ್ನು ದಿನಾಂಕ 09-05-2024, ರೂ.82,224/- ಎಂದು ನಮೂದಿಸಿ ಚೆಕ್ ಗೆ ಸಹಿ ಮಾಡಿಕೊಟ್ಟು, ಸದರಿ ಚೆಕ್ ನ್ನು ಬ್ಯಾಂಕ್ ಗೆ ನಗದೀಕರಿಸಲು ಹಾಜರುಪಡಿಸಿದ ಕೂಡಲೇ ಹಣ ಸಿಗುತ್ತದೆ ಎಂಬ ಭರವಸೆಯನ್ನು ನೀಡಿರುತ್ತೀರೆಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ-

ಪ್ರಶ್ನೆಃ 3. ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಪಿರ್ಯಾದಿಯವರು ನಗದೀಕರಿಸುವ ಸಲುವಾಗಿ ಸದರಿ ಚೆಕನ್ನು ಅವರ ಸಂಸ್ಥೆಯ ಖಾತೆಯಿರುವ **ಕೆನರಾ ಬ್ಯಾಂಕ್.,**

**ಚಂದಾವರ** ಶಾಖೆಯಲ್ಲಿ ಹಾಜರುಪಡಿಸಿದಾಗ, ಸದರಿ ಬ್ಯಾಂಕ್ ನವರು, Drawers Signature Differs ಎಂಬ ಮೆಮೋದೊಂದಿಗೆ ಸದರಿ ಚೆಕನ್ನು ದಿನಾಂಕ 15-05-2024 ರಂದು ನಿಪಿ-2 ರಂತೆ ವಾಪಾಸ್ ನೀಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ-

ಪ್ರಶ್ನೆಃ 4. ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಈ ಕುರಿತು ಪಿರ್ಯಾದಿಯವರು ನಿಮಗೆ ವಕೀಲರ ಮೂಲಕ ದಿನಾಂಕ 30-05-2024 ರಂದು ನಿಪಿ-3 ರಂತೆ ರಿಜಿಸ್ಟರ್ ನೋಟಿಸ್ ಕಳುಹಿಸಿದ್ದು, ಸದರಿ ನೋಟಿಸ್ ನೀವು ಸ್ವೀಕರಿಸದೇ ಇರುವ ಕಾರಣ ದಿನಾಂಕ 16-06-2024 ರಂದು Unclaimed Return To Sender ಎಂಬ ಶರಾದೊಂದಿಗೆ ವಾಪಾಸ್ ಬಂದಿರುತ್ತದೆ ಹಾಗೂ ನೀವು ಚೆಕ್ ನಲ್ಲಿ ನಮೂದಿಸಿದ ಹಣವನ್ನು ನೀಡಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ-

ಪ್ರಶ್ನೆಃ 5. ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಿಪಿ-5 ಆಥೋರೈಸೇಷನ್ ಲೆಟರನ್ನು ಹಾಜರುಪಡಿಸಿ ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ-

ಸುಳ್ಳು.

ಪ್ರಶ್ನೆ 6: ನಿಮ್ಮ ಪರವಾಗಿ ಏನಾದರೂ ಸಾಕ್ಷಿ ಇದೆಯೇ?

ಆರೋಪಿಯ ಉತ್ತರಃ- ಇದೆ.

ಪ್ರಶ್ನೆ 7: ಷದ್ರಿ ಪ್ರಕರಣ ಕುರಿತು ನೀವು ಏನಾದರೂ ಹೇಳುವುದು ಇದೆಯೇ?

ಆರೋಪಿಯ ಉತ್ತರಃ- ಇಲ್ಲ.

(ಈ ಮೂಲಕ ಪ್ರಮಾಣಿಸುವುದೇನೆಂದರೆ ಆರೋಪಿಯು ಕೊಟ್ಟಂತ ಹೇಳಿಕೆಯ ಉತ್ತರವನ್ನು ಪಡೆಯಲಾಗಿದೆ.)

**ಸಹಿ ಇದೆ.**

**ದಿನಾಂಕಃ- 14-11-2025.**

**(ಈರಣ್ಣ ಹುಣಶಿಕಟ್ಟಿ).,**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಮ್.ಎಫ್.ಸಿ.,ಹೊನ್ನಾವರ.**

ಆರೋಪಿಯ ಸಹಿಃ- ಸಹಿ ಇದೆ.

****